# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1901** |
| ಮಾನ್ಯ ಸದಸ್ಯರ ಹೆಸರು | : | **ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭೆಯಿಂದ ಚುನಾಯಿತರಾದವರು)** |
| ಉತ್ತರಿಸುವ ದಿನಾಂಕ | : | **24.03.2026** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ ಈವರೆಗೆ ಎಷ್ಟು ಮಹಿಳಾ ಸ್ವಯಂ ಉದ್ಯೋಗ ಘಟಕಗಳು ನೋಂದಣಿಯಾಗಿವೆ ಮತ್ತು ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು): | ಕಳೆದ 3 ವರ್ಷಗಳಲ್ಲಿ ಉದ್ಯಮ್ ಪೋರ್ಟಲ್ ನಲ್ಲಿ ಕಲಬುರಗಿ ಜಿಲ್ಲೆಯಲ್ಲಿ ನೋಂದಣಿಯಾದ ಮಹಿಳಾ ಮಾಲೀಕತ್ವದ/ಸ್ವಯಂ ಉದ್ಯೋಗ ಘಟಕಗಳ ತಾಲ್ಲೂಕುವಾರು ವಿವರ **ಅನುಬಂಧ-1 ರಲ್ಲಿ** ಲಗತ್ತಿಸಿದೆ.<br><br>ಉದ್ಯಮ್ ಪೋರ್ಟಲ್ ಅಡಿಯಲ್ಲಿ ನೋಂದಣಿಗೆ ಅವಕಾಶವಿರುತ್ತದೆ. ಆದರೆ ಕಾರ್ಯನಿರ್ವಹಿಸುತ್ತಿರುವ ಘಟಕಗಳ ವಿವರಗಳನ್ನು ಪಡೆಯುವ ವ್ಯವಸ್ಥೆ ಇರುವುದಿಲ್ಲ. |
| (ಆ) | ಕಲಬುರಗಿ ಜಿಲ್ಲೆಯ ಪ್ರಸಿದ್ಧ 'ತೊಗರಿ ಬೆಳೆ' ಸಂಸ್ಕರಣೆ ಮತ್ತು ಮೌಲ್ಯವರ್ಧನೆಯಲ್ಲಿ ತೊಡಗಿರುವ ಮಹಿಳಾ ಉದ್ಯಮಿಗಳಿಗೆ ಅಥವಾ ಮಹಿಳಾ ಸ್ವಸಹಾಯ ಗುಂಪುಗಳಿಗೆ (SHGS) ಸರ್ಕಾರದಿಂದ ನೀಡಲಾಗುತ್ತಿರುವ ವಿಶೇಷ ರಿಯಾಯಿತಿ ಮತ್ತು ಸಬ್ಸಿಡಿಗಳು ಯಾವುವು; | ಕರ್ನಾಟಕ ರಾಜ್ಯ ಕೈಗಾರಿಕಾ ನೀತಿ 2025-30 ರಂತೆ ಕೆಳಕಾಣಿಸಿದ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಅರ್ಹ ಕೈಗಾರಿಕೆಗಳಿಗೆ ನೀಡಿ ಉತ್ತೇಜಿಸಲಾಗುತ್ತಿದೆ ಹಾಗೂ ಸದರಿ ಕೈಗಾರಿಕಾ ನೀತಿಯಡಿ ಮಹಿಳಾ ಉದ್ದಿಮೆದಾರರಿಗೆ ಶೇ.5 ರಷ್ಟು ಹೆಚ್ಚುವರಿ ಸಹಾಯಧನ ಕಲ್ಪಿಸಲಾಗಿದೆ.<br><br>1. ಬಂಡವಾಳ ಹೂಡಿಕೆ ಸಹಾಯಧನ / ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.<br>2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ವಿನಾಯಿತಿ.<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.<br>5. ವಿದ್ಯುತ್ ಚ್ಛಕ್ತಿ ಸಹಾಯಧನ.<br>6. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ<br>7. ರಫ್ತು ಘಟಕಗಳಿಗೆ ಪ್ರೋತ್ಸಾಹ.<br>8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರೀಕರಣ ಉತ್ತೇಜನ<br>9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ |
| (ಇ) | ಕಲ್ಯಾಣ ಕರ್ನಾಟಕ ಭಾಗದ ಮಹಿಳಾ ಉದ್ಯಮಿಗಳಿಗಾಗಿ ಮೀಸಲಿಟ್ಟ ಸಬ್ಸಿಡಿ ಹಣ ಬಿಡುಗಡೆಯಾಗದೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಗೆ ಮಂಜೂರಾದ ಮತ್ತು ಬಿಡುಗಡೆಯಾದ ಸಬ್ಸಿಡಿ ಮೊತ್ತ ಎಷ್ಟು; | ಕೈಗಾರಿಕಾ ನೀತಿ 2020-25 ರಡಿಯಲ್ಲಿ ಸಹಾಯಧನ ಮಂಜೂರಾತಿಯಾಗಿರುವ ಘಟಕಗಳಿಗೆ ವಾರ್ಷಿಕ ವಹಿವಾಟು ಆಧಾರಿತವಾಗಿ ಸಹಾಯಧನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ. ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ರಾಜ್ಯ ಮಟ್ಟದ ಜೇಷ್ಠತೆಯ ಮೇರೆಗೆ ಸಹಾಯಧನ ಬಿಡುಗಡೆ ಮಾಡಲಾಗುತ್ತಿದೆ.<br>ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳಾ ಉದ್ಯಮಿಗಳಿಗೆ ಮಂಜೂರಾದ ಮತ್ತು ಬಿಡುಗಡೆಯಾದ ಸಬ್ಸಿಡಿ ಮೊತ್ತದ ವಿವರ: |

| ಮಂಜೂರಾತಿ ವರ್ಷ | ಮಂಜೂರಾದ ಸಹಾಯಧನದ ವಿವರ | | ಬಿಡುಗಡೆಯಾದ ಸಹಾಯಧನದ ವಿವರ | |
|---|---|---|---|---|
| | ಘಟಕ | ಮೊತ್ತ ರೂ.ಗಳಲ್ಲಿ | ಘಟಕ | ಮೊತ್ತ ರೂ.ಗಳಲ್ಲಿ |
| 2022-23 | 1 | 6,510 | 1 | 6,510 |
| 2023-24 | 9 | 2,55,92,077 | 1 | 20,00,000 |
| 2024-25 | 3 | 1,61,37,775 | - | - |
| | 13 | 4,17,36,362 | 2 | 20,06,510 |

| | | |
|---|---|---|
| (ಈ) | ಜಿಲ್ಲೆಯ ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳ (ಉದಾ: ಕೌದಿ ಕಲೆ, ಆಹಾರ ಪದಾರ್ಥಗಳು) ಮಾರಾಟಕ್ಕಾಗಿ ಕಲಬುರಗಿ ನಗರದಲ್ಲಿ ಸುಸಜ್ಜಿತ 'ಮಹಿಳಾ ಮಾರುಕಟ್ಟೆ ಸಂಕೀರ್ಣ (Exclusive Women's Market Complex) ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: | ಇಲ್ಲ. |
| (ಉ) | ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕ್‌ಗಳು ಮಹಿಳಾ ಉದ್ಯಮಿಗಳಿಗೆ ಸಾಲ ನೀಡಲು ಅನಗತ್ಯ ವಿಳಂಬ ಮಾಡುತ್ತಿರುವುದು ಮತ್ತು ಶೇ. 100 ರಷ್ಟು ಭದ್ರತೆ (Collateral) ಕೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದನ್ನು ಸರಳಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರದ ಯೋಜನೆಗಳಾದ ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ರೂ.10.00 ಲಕ್ಷದವರೆಗೆ ಹಾಗೂ ಪ್ರಧಾನ ಮಂತ್ರಿ ಉದ್ಯೋಗ ಸೃಜನ ಯೋಜನೆ (PMEGP) ರಡಿ ರೂ.20.00 ಲಕ್ಷದವರೆಗೆ ಮಹಿಳಾ ಉದ್ಯಮಿಗಳಿಗೆ ಯಾವುದೇ ಭದ್ರತೆ (Collateral) ಪಡೆಯದೇ ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಸಾಲ ನೀಡಲಾಗುತ್ತಿದೆ. |

**ಸಿಐ 57 ಎಸ್‌ಎಸ್‌ಐ 2026**

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ-1

| No. of Units registered by Women Entrepreneurs in Udyam Portal from 2022-23 to 2024-25 | | | | | |
|---|---|---|---|---|---|
| **Sl. No.** | **District** | **Taluka** | **2022-23** | **2023-24** | **2024-25** |
| 1 | Kalaburagi | Aland | 59 | 199 | 138 |
| 2 | | Afzalpur | 41 | 118 | 251 |
| 3 | | Gulbarga | 653 | 823 | 1107 |
| 4 | | Chincholi | 61 | 93 | 113 |
| 5 | | Sedam | 56 | 91 | 240 |
| 6 | | Chittapur | 39 | 67 | 153 |
| 7 | | Jevargi | 41 | 72 | 131 |
| 8 | | Kalagi | 31 | 9 | 15 |
| 9 | | Kamalapura | 26 | 15 | 25 |
| 10 | | Yadrami | 15 | 7 | 74 |
| 11 | | Shahbadha | 33 | 26 | 62 |
| | | **Total** | 1055 | 1520 | 2309 |